**SC No. 149/2025**
**PW-8**
**CW-30**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

## ಎಸ್.ಸಿ ನಂ: 149/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಆಕಾಶ ಸರೀಕರ್ | ಪ್ರಾಸಾ: 08 |
| ತಂದೆಯ/ಗಂಡನ ಹೆಸರು | : | ಸದಾಶಿವ ಸರೀಕರ್ | ಚಾಸಾ: 30 |
| ವಯಸ್ಸು | : | 26 ವರ್ಷ | ದಿನಾಂಕ : 02.09.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಮಾನವ ಸಂಪನ್ಮೂಲ ಸರಬರಾಜು ಏಜೆನ್ಸಿ | |
| ವಾಸಸ್ಥಳ | : | ಶಿವಾಜಿ ನಗರ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಬೆಳಗಾವಿಯ ಭಾಗ್ಯನಗರದ ಪೋಲಿಸ ಚೌಕಿಯ ಬಳಿ ಶ್ರೀ ಸುಬ್ರಮಣ್ಯ ಹೆಲ್ತ ಹೋಮ್ ಕೇರ್ ಎನ್ನುವ ಹೆಸರಿನಲ್ಲಿ ವಯಸ್ಸಾದವರನ್ನು ನೋಡಿಕೊಳ್ಳಲು ಮಾನವ ಸಂಪನ್ಮೂಲವನ್ನು ಸರಬರಾಜು ಮಾಡುವ ಏಜೆನ್ಸಿಯನ್ನು ನಡೆಸಿಕೊಂಡು ಬರುತ್ತಿದ್ದೇನೆ. ನನಗೆ ಚಾಸಾ 27 ಗೊತ್ತು. ಆಕೆ ನಮ್ಮ ಏಜೆನ್ಸಿಯ ಕೈ ಕೆಳಗಡೆ ಕೆಲಸ ಮಾಡುತ್ತಿದ್ದಳು. ನನಗೆ 1ನೇ ಆರೋಪಿಯ ಪರಿಚಯ ಇದೆ. ಆಕೆ ಕೋವಿಡ್ ಸಮಯದಲ್ಲಿ ತಾತ್ಕಾಲಿಕವಾಗಿ ಸುಮಾರು 15 ದಿನಗಳ ಕಾಲ ಏಜೆನ್ಸಿ ಕೈ ಕೆಳಗಡೆ ಕೆಲಸ ಮಾಡಿದ್ದರು.

2. ದಿ. 08.06.2024 ರಂದು ಜೈನರ ಎನ್ನುವವರು ನನಗೆ ಕರೆ ಮಾಡಿ ಒಂದು ಮಗು ಕೊಡುವುದು ಇದೆ ಮತ್ತು ಅದು ಯಾರಿಗಾದರೂ ಬೇಕಾದಲ್ಲಿ ಹೇಳಿ ಎಂದು ನನಗೆ ತಿಳಿಸಿದರು. ನಾನು ಆ ವಿಚಾರವನ್ನು ಮಕ್ಕಳ ಸಹಾಯವಾಣಿ ಕೇಂದ್ರದ ಮಹಾಂತೇಶರವರಿಗೆ ಫೋನ ಮಾಡಿ ತಿಳಿಸಿದೆನು. ಅವರು ಅವರ ನಂಬರ ಕೊಡಿ ಮತ್ತು ನಾವು ಅವರಿಗೆ ಆ ಮಗುವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇವೆ ಎಂದು ನನಗೆ ತಿಳಿಸಿದರು. ಆ ದಿನ ಬೇರೆ ಯಾವುದೇ ಘಟನೆ ನಡೆದಿಲ್ಲ.

3. ಮಾರನೇ ದಿನ ದಿ.09.06.2024ರಂದು ನನಗೆ ಮಕ್ಕಳ ಸಹಾಯವಾಣಿಯ ಡಿಸಿಪಿ ರವರು ನಾವು ಆ ಮಗುವನ್ನು ಸುರಕ್ಷಿತವಾಗಿ ಪಡೆದುಕೊಂಡಿದ್ದೇವೆ ಎಂದು ಹೇಳಿದರು. ಇದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ. ಜೈನರವರು ನನಗೆ ಫೋನ ಮಾಡುವಾಗ ಮಗುವನ್ನು ರೂ.2,00,000/- ಕ್ಕೆ ಕೊಡುವುದಾಗಿ ಹೇಳಿದ್ದರು. ಮಕ್ಕಳ ಸಹಾಯವಾಣಿಯ ಡಿಸಿಪಿ ರವರಿಗೆ ನಾನು ಫೋನ ಮಾಡಿ ತಿಳಿಸುವಾಗ ಚಾಸಾ 27ರವರು ನನ್ನೊಂದಿಗೆ ಇದ್ದರು. ಮುಂದೆ ಚಾಸಾ 27ರವರು ಡಿಸಿಪಿ ರವರೊಂದಿಗೆ ಮಾತನಾಡಿದಾಗ ಅವರು ಆಕೆಗೆ ನೀವೆ ಖರೀದಿ ಮಾಡುತ್ತೇವೆ ಎಂದು ಮಾತನಾಡಿ ಎಂದು ಹೇಳಿದ್ದರು. ಆ ಮಹಾದೇವಿ ಜೈನರವರನ್ನು ನೋಡಿದಲ್ಲಿ ನಾನು ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ 1ನೇ ಆರೋಪಿಯನ್ನು ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ 1ನೇ ಆರೋಪಿ ಪರವಾಗಿಃ ಶ್ರೀ ಸಿ ಎ ಟಿ. ವಕೀಲರಿಂದಃ</u>

4. 8ನೇ ತಾರೀಖಿನಂದು ಜೈನರವರು ನನಗೆ ಫೋನ ಮಾಡಿ ಮಗು ಕೊಡುವುದು ಇದೆ ಎಂದು ತಿಳಿಸಿದಾಗ ಆ ಮಗು ಯಾರದ್ದು ಮತ್ತು ಅದನ್ನು ಯಾಕೆ ಕೊಡುತ್ತಾರೆ ಎನ್ನುವ ಬಗ್ಗೆ ನಾನು ಯಾವುದೇ ವಿಚಾರ ಮಾಡಿರಲಿಲ್ಲ. ಮಹಾಂತೇಶರವರು ಮಕ್ಕಳ ಇಲಾಖೆಯಲ್ಲಿ

ಕೆಲಸ ಮಾಡುತ್ತಿದ್ದರಿಂದ ನಾನು ಅವರಿಗೆ ಈ ವಿಚಾರವನ್ನು ತಿಳಿಸಿದ್ದು ಅದನ್ನು ಹೊರತುಪಡಿಸಿ ನಾನು ಅವರಿಗೆ ಬೇರೆ ಯಾವುದೇ ವಿಷಯವನ್ನು ತಿಳಿಸಿರಲಿಲ್ಲ. ನಾನು ಮತ್ತು ಚಾಸಾ 27 ರವರು ಈ ಪ್ರಕರಣದ ಬಗ್ಗೆ ಯಾವತ್ತೂ ಚರ್ಚೆ ಮಾಡಿರಲಿಲ್ಲ. ಡಿಸಿಪಿ ರವರು ಮುಂದೆ ಚಾಸಾ 27 ರವರೊಂದಿಗೆ ಮಾತನಾಡಿದ ನಂತರ ಏನೆಲ್ಲಾ ಬೆಳವಣಿಗೆಗಳು ಆಗಿದ್ದವು ಎಂಬ ಬಗ್ಗೆ ನನಗೆ ಸ್ವಂತ ಮಾಹಿತಿ ಇರುವುದಿಲ್ಲ. ಈ ಪ್ರಕರಣದಲ್ಲಿ ಇದೇ ರೀತಿ ಮಾಡಬೇಕು ಎಂದು ನಾನು ಚಾಸಾ 27 ರವರಿಗೆ ಯಾವುದೇ ಸೂಚನೆ ಕೊಟ್ಟಿಲ್ಲ. 1ನೇ ಆರೋಪಿಯು ನನ್ನ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನುವ ಕಾರಣದಿಂದ ನನಗೆ ಆಕೆಯ ಗುರುತು ಇತ್ತು. 1ನೇ ಆರೋಪಿಯು ನನ್ನ ಏಜೆನ್ಸಿಯಿಂದ ಕೆಲಸ ಬಿಟ್ಟ ನಂತರ ನನ್ನ ಮತ್ತು ಆಕೆಯ ನಡುವೆ ಯಾವುದೇ ಸಂಪರ್ಕ ಇರಲಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ಯಾವತ್ತೂ ನನ್ನ ಹೇಳಿಕೆಯನ್ನು ಪಡೆದುಕೊಂಡಿರಲಿಲ್ಲ. ದಿ.08.06.2024 ರಂದು 1ನೇ ಆರೋಪಿಯು ನನಗೆ ಫೋನ ಮಾಡಿ ಒಂದು ಮಗು ದತ್ತಕ ಕೊಡುವುದಕ್ಕೆ ಇದೆ ಎಂದು ಹೇಳಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. 1ನೇ ಆರೋಪಿಯು ನನ್ನ ಏಜೆನ್ಸಿಯ ಕೆಲಸ ಬಿಟ್ಟ ನಂತರ ಖಾಸಗಿಯಾಗಿ ನರ್ಸ ಕೆಲಸ ಮಾಡುತ್ತಿದ್ದಾರೆ ಎನ್ನುವುದು ನಿಜ. ನಾನು ಮತ್ತು 1ನೇ ಆರೋಪಿಯು ಒಂದೇ ರೀತಿಯ ನೌಕರಿ ಮಾಡುತ್ತಿರುವ ಕಾರಣ ಆ ದ್ವೇಷದಿಂದ ನಾನು ಚಾಸಾ 27 ರವರ ಮೂಲಕ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳಿಸಿದ್ದೇನೆ ಎನ್ನುವುದು ನಿಜವಲ್ಲ.

<u>ಪಾಟೀ ಸವಾಲುಃ ಇತರ ಆರೋಪಿತರ ಪರವಾಗಿಃ</u>

ಇತರ ಆರೋಪಿತರ ಪರ ವಕೀಲರು ತಾವು ಮೇಲಿನ ಪಾಟೀ ಸವಾಲನ್ನು ಅನುಸರಿಸುವುದಾಗಿ ಹೇಳುತ್ತಾರೆ.

**SC No. 149/2025**
**PW-8**
**CW-30**

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.